ಇ) ಎಲ್ಲಾ ಏಕ ಸದಸ್ಯ ಉಪ ಖಜಾನೆಗಳನ್ನು ಪೂರ್ಣ ಪ್ರಮಾಣದ ಉಪ ಖಜಾನೆಯಾಗಿ ಪರಿವರ್ತಿಸಲು ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಉಡುಪಿ ತಾಲ್ಲೂಕು ಬ್ರಹ್ಮಾವರ ಉಪ ಖಜಾನೆಯಲ್ಲಿ ವಿಧವಾ ಮಾಸಾಶನ, ಅಂಗವಿಕಲ ಮಾಸಾಶನ, ವೃದ್ಧಾಪ್ಯ ವೇತನದ ಬಟವಾಡೆ ಆಗುತ್ತಿಲ್ಲ. ಆದ್ದರಿಂದ ಉಪಖಜಾನೆ ಪ್ರದೇಶದ ಜನರ ಉಪಯೋಗಕ್ಕೆ ಇರುವ ಆ ಉಪಖಜಾನೆಯಲ್ಲಿ ಇದೆಲ್ಲಾ ಆಗಬೇಕು ಎಂದು ಪ್ರಶ್ನೆ ನಾನು ಕೇಳಿದ್ದೆ. ಜನರಿಗೆ ಆಗುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆ, ಉಪ ಖಜಾನೆಯನ್ನು ಪೂರ್ಣ ಪ್ರಮಾಣದ ಉಪ ಖಜಾನೆಯಾಗಿ ಪರಿವರ್ತಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರ ಬಂದಿದೆ. ಪೂರ್ಣ ಪ್ರಮಾಣದ ಆಫೀಸ್ ಆಗುವವರೆಗೆ ಉಡುಪಿ ಉಪಖಜಾನೆಯಿಂದ ಏನು ವಿಧವಾ ಮಾಸಾಶನ ಬೇರೆ ಕೊಡುತ್ತಿದ್ದಾರೆ ಅದನ್ನು ಬ್ರಹ್ಮಾವರದಲ್ಲೇ ಕೊಡಲಿಕ್ಕೆ ಕಾರ್ಯಕ್ರಮ ಹಾಕಬೇಕೆಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಉಪಖಜಾನೆ ಬ್ರಹ್ಮಾವರದಲ್ಲಿದೆ ಪೂರ್ಣ ಪ್ರಮಾಣದ ಖಜಾನೆ ಇರತಕ್ಕದ್ದು ಉಡುಪಿಯಲ್ಲಿ. ದೂರವಾಗುತ್ತದೆ ಮತ್ತೊಂದಾಗುತ್ತದೆ ಎಂದು ಹೇಳಿದ್ದಾರೆ. ಅವರ'ಇ' ಪ್ರಶ್ನೆಗೂ ಕೂಡ ಉತ್ತರವನ್ನು ನಾವು ಕೊಟ್ಟಿದ್ದೇವೆ. ಏಕಸದಸ್ಯ ಉಪಖಜಾನೆ ರಾಜ್ಯದಲ್ಲಿ ಎನಿವೆ ಅವುಗಳನ್ನು ಪೂರ್ಣ ಪ್ರಮಾಣದ ಉಪಖಜಾನೆ ಮಾಡಬೇಕು ಎಂಬ ಪ್ರಸ್ತಾಪ ಸರ್ಕಾರದ ಮುಂದೆ ಇದೆ. ಅದರ ಬಗ್ಗೆ ಸದ್ಯದಲ್ಲಿ ಸರ್ಕಾರ ತೀರ್ಮಾನ ಮಾಡಬೇಕೆಂದು ಇದೆ. ಅದಕ್ಕಿಂತ ಮೊದಲೇ ಅಲ್ಲಿ ಜನರಿಗೆ ಏನು ತೊಂದರೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ ಅದಕ್ಕೆ ಕೂಡಲೇ ತಾತ್ಕಾಲಿಕವಾಗಿ ಒಂದು ವ್ಯವಸ್ಥೆ ಮಾಡಿ ಪೂರ್ಣ ಅಧಿಕಾರ ನಿಮ್ಮ ಬ್ರಹ್ಮಾವರ ಉಪಖಜಾನೆಗೆ ನಾವು ಕೊಡಿಸುತ್ತೇವೆ. ಅದಕ್ಕೆ ವ್ಯವಸ್ಥೆಯನ್ನು ಈಗಲೇ ನಾವು ತಿಳಿಸುತ್ತೇವೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಬಿಡುಗಡೆಯಾದ ಹಣ.

234-ಶ್ರೀ ರವೀಂದ್ರನಾಥ್ ಬಾಬು(ಕೊಟ್ಟೂರು): ಮಾನ್ಯ ಯೋಜನೆ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) 1991-92ನೇ ಸಾಲಿನಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಇಲಾಖೆಗಳಿಗೆ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಹಣವನ್ನು ನೀಡಲಾಗಿದೆ(ಜಿಲ್ಲಾವಾರು ಮತ್ತು ಇಲಾಖಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು):

ಅ) ಹೌದು.

ಆ) ವಲಯವಾರು ಹಂಚಿಕೆ ಮತ್ತು 1991-92ನೇ ಸಾಲಿನಲ್ಲಿ 15-2-92 ಅಂತ್ಯದವರೆಗೆ ಮಾಡಿದ ಜಿಲ್ಲಾವಾರು ಖರ್ಚುಗಳ ವಿವರಗಳನ್ನೊಳಗೊಂಡ ತಃಖ್ತೆಯನ್ನು ಲಗತ್ತಿಸಲಾಗಿದೆ.

HYDERBAD KARNATAKA AREA DEVELOPMENT PROGRAMME
ಹೈದ್ರಾಬಾದ್ – ಕರ್ನಾಟಕ ಪ್ರದೇಶಾಭಿವೃದ್ಧಿ ಕಾರ್ಯಕ್ರಮ

Statement showing the Sector-wise and District-wise expenditure of 1990-91 and allocation/Expenditure of 1991-92 (to end of 15.2.1992)

1991-92ನೇ ಸಾಲಿನಲ್ಲಿ ಹೈದ್ರಾಬಾದ್ – ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ದಿನಾಂಕ 15-2-92ರವರೆಗೆ ವಿವಿಧ ಕಾಮಗಾರಿಗಳಿಗಾಗಿ (ಜಿಲ್ಲಾವಾರು ಮತ್ತು ವಲಯವಾರು) ಖರ್ಚು ಮಾಡಿರುವ ವಿವರದ ಪಟ್ಟಿ

(Rs. in Lakhs) *(ಲಕ್ಷ ರೂ.ಗಳಲ್ಲಿ)*

ಕ್ರ. ಸಂ.	ವಲಯಗಳು	1991-92ರಲ್ಲಿ ಒದಗಿಸಲಾಗಿರುವ ಹಣ	Expenditure during the year to end of 15th February 1992 ಪಸಕ್ತ ಸಾಲಿನಲ್ಲಿ ದಿನಾಂಕ 15-2-92ರವರೆಗಿನ ಖರ್ಚು				Total ಒಟ್ಟು
			Bellary ಬಳ್ಳಾರಿ	Gulbarga ಗುಲ್ಬರ್ಗಾ	Raichur ರಾಯಚೂರು	Bidar ಬೀದರ್	
1	2	3	4	5	6	7	8
1.	Roads and Bridges ರಸ್ತೆ ಮತ್ತು ಸೇತುವೆಗಳು	1125.00	161.34	380.21	249.37	102.13	893.05
2.	Major and Medium Irrigation ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳು	225.00	89.26	22.19	15.16		220.56

3.	Minor Irrigation ಸಣ್ಣ ನೀರಾವರಿ	420.00	12.84	91.63	6.84	10.53	121.84
4.	Education ಶಿಕ್ಷಣ	850.00	103.66	221.23	103.09	93.53	521.51
5.	Rural Development & Panchyat Raj ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	939.00	—	—	—	—	—
6.	a) M.L.A's Constituency ಅ) ಶಾಸಕರ ಕ್ಷೇತ್ರಾವಾರು ಕಾಮಗಾರಿಗಳು	—	154.20	197.00	176.00	108.00	635.20
	b) Rural Water Supply Programme ಬಿ) ಗ್ರಾಮೀಣ ನೀರು ಸರಬರಾಜು ಯೋಜನೆ	—	83.00	35.00	97.00	2.00	217.00
7.	KUWS & D.E. ನಗರ ನೀರು ಸರಬರಾಜು ಹಾಗೂ ಒಳಚರಂಡಿ ಯೋಜನೆ	600.00	101.82	360.61	116.80	11.22	589.73

8.	Health & Family Welfare Programme ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮ	250.00	21.63	32.51	19.50	48.02	121.46
9.	Co-Operation ಸಹಕಾರ	66.00	—	—	—	—	—
10.	K.E.B. ವಿದ್ಯುಚ್ಛಕ್ತಿ	500.00	50.00	50.00	50.00	50.00	200.00
11.	Establishment ಸಿಬ್ಬಂದಿ	25.00	—	—	—	—	2.00

Total amount released — Rs. 40.00 Crores

ಒಟ್ಟು ಬಿಡುಗಡೆಯಾದ ಮೊತ್ತ

Expenditure up to the end of 15-2-92 Rs. 3522.33 Lakhs

ಇದುವರೆವಿಗೂ ಖರ್ಚಾದ ಮೊತ್ತ

Remaining amount Rs. 4.8 Crores with Divisional Commissioner, Gulbarga for Clearing pending bills.

ಉಳಿದ ಮೊತ್ತ ಗುಲ್ಬರ್ಗಾ ವಿಭಾಗಾಧಿಕಾರಿಯವರ ಬಳಿ ಬಾಕಿ ಬಿಲ್ಲುಗಳ ಪಾವತಿಗಾಗಿ ಇದೆ.

ಶ್ರೀ ಕ.ವಿ. ರವೀಂದ್ರನಾಥ್ ಬಾಬು: ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ 40 ಕೋಟಿ ರೂಪಾಯಿಗಳನ್ನು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿನಿಂದ ಬಿಡುಗಡೆಯಾಗಿದೆ. ಅದರಲ್ಲಿ ರೂರಲ್ ಡೆವಲಪ್‌ಮೆಂಟ್ ಮತ್ತು ಪಂಚಾಯತ್‌ರಾಜ್‌ಗೆ ಸುಮಾರು 90 ಕೋಟಿ ರೂಪಾಯಿ ಏನು ಹಣ ಕೊಟ್ಟಿದ್ದಾರೆ ಅದು ಯಾವ ಜಿಲ್ಲೆಗೂ ಕೊಟ್ಟಿಲ್ಲ. ಕೆಲಸಗಳು ಹಾಗೆಯೇ ನಿಂತಿವೆ. ಹಾಗೆಯೇ ಕೋ-ಆಪರೇಷನ್‌ಗೆ (ಕಾಲಂ ನಂಬರ್ 8) ಯಾವ ಜಿಲ್ಲೆಗೂ ಹಣ ಬಿಡುಗಡೆ ಆಗಿಲ್ಲ. ಅದಕ್ಕೆ 66 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? ಕೆಲಸ ಯಾವಾಗ ಪ್ರಾರಂಭ ಮಾಡುತ್ತೀರಿ? ಅಲ್ಲಿ ಕೆಲಸಗಳದು ಬಹಳ ತೊಂದರೆ ಇದೆ. ಆದ್ದರಿಂದ ಹಣ ಬಿಡುಗಡೆ ಮಾಡಬೇಕು ಒಂದು. ಎರಡನೆಯದು ಕೆಲಸಗಳು ಪೆಂಡಿಂಗ್ ಇವೆ ಎಂದು ಇಲ್ಲಿ ತೋರಿಸುತ್ತಿದ್ದಾರೆ. ಪೆಂಡಿಂಗ್ ಇರುವುದಕ್ಕೆ ಕಾರಣ ಅಪ್ರಾಕ್ಸಿಮೇಟ್ ಎಸ್ಟಿಮೇಟ್ ಮಾಡಿ ಕಳುಹಿಸುವುದರಿಂದ ಕೆಲಸಗಳಿಗೆ ದುಡ್ಡು ಸಾಲದೇ ಇರುವುದರಿಂದ ಅವರು ಕೆಲಸ ತೆಗೆದುಕೊಳ್ಳುತ್ತಿಲ್ಲ. ಉಳಿಕೆ ಹಣ ಅವರಿಗೆ ಕೊಟ್ಟರೆ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಇಲಾಖೆಯವರು ಹೇಳುತ್ತಿದ್ದಾರೆ. ಉಳಿಕೆ ಹಣ ಬಿಡುಗಡೆ ಮಾಡಿ ಕೆಲಸ ಆದಷ್ಟು ಜಾಗ್ರತೆ ಪ್ರಾರಂಭ ಮಾಡಿದರೆ ಒಳ್ಳೆಯದು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ: ಅಧ್ಯಕ್ಷರೆ, ಅವರು ಹೇಳಿದ ಹಾಗೆ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ಹಣ ಬಿಡುಗಡೆಯಾಗಿದ್ದರೂ ಕೆಲಸ ಸಾಗಿಲ್ಲ. ಅವರು ಕೇಳುತ್ತಾ ಇರುವ ಹಾಗೆ ರಿಮೈನಿಂಗ್ 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. 35.22 ಖರ್ಚಾಗಿದೆ. ಇನ್ನು ಬಾಕಿ ದುಡ್ಡು ಪೆಂಡಿಂಗ್ ಬಿಲ್‌ಗೋಸ್ಕರ ಡಿವಿಷನಲ್ ಕಮೀಷನರ್ ಹತ್ತಿರ ಇದೆ. ಅದನ್ನೆಲ್ಲಾ ಬಿಡುಗಡೆ ಮಾಡಿಕೊಟ್ಟು ಕೆಲಸವೆಲ್ಲಾ ಆಗುವ ಹಾಗೆ ಏರ್ಪಾಡು ಮಾಡುತ್ತೇವೆ.

ಅಧ್ಯಕ್ಷರು : ಇಸಾದಿಕ್ ಅಲಿ ಖಾನ್ ಅವರೇ ಮಾನ್ಯ ಗೃಹಮಂತ್ರಿಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ತಡೆಹಿಡಿಯುತ್ತಿದ್ದೇನೆ.

ರಾಜ್ಯದ ಗಡಿ ಪ್ರದೇಶದ ಅಭಿವೃದ್ಧಿಗಾಗಿ ಹಣ ಮಂಜೂರಾತಿ.

186 - ಡಾ. ವೈ. ನಾಗಪ್ಪ (ಹರಿಹರ): ಮಾನ್ಯ ಯೋಜನೆ ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗಡಿ ಪ್ರದೇಶದ ಅಭಿವೃದ್ಧಿಗಾಗಿ ಅನುದಾನ ನೀಡುವುದನ್ನು ಸರಕಾರ ಯಾವ ವರ್ಷದಿಂದ ಜಾರಿಯಲ್ಲಿ ತಂದಿದೆ. ಹಾಗೂ ಈ ವರೆಗೆ ಪ್ರತಿ ಹಣಕಾಸಿನ ವರ್ಷದಲ್ಲಿ ಖರ್ಚಾಗಿರುವ ಹಣವೆಷ್ಟು? (ಜಿಲ್ಲಾವಾರು ಬಿಡುಗಡೆಯಾಗಿರುವ ಮತ್ತು ವಿನಿಯೋಗಿಸಲಾಗಿರುವ ಹಣದ ಮೊತ್ತದ ವಿವರ ನೀಡುವುದು)

ಆ) ಈ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಗಡಿ ಪ್ರದೇಶದ ಅಭಿವೃದ್ಧಿಗೆ ಅನುದಾನ ಜಿಲ್ಲಾವಾರು ಮಾಡಲಾಗಿದೆಯೇ?

ಇ) ಹಾಗಿದ್ದಲ್ಲಿ ಎಷ್ಟೆಷ್ಟು ಹಾಗೂ ಅಯಾಜಿಲ್ಲೆಗಳಲ್ಲಿ ಯಾವ ಯಾವ ಜಿಲ್ಲೆಯ ತಾಲ್ಲೂಕುಗಳು ಈ ಅನುದಾನದ ಪ್ರಯೋಜನ ಪಡೆದಿವೆ?

ಈ) ರಾಜ್ಯದ ಗಡಿ ಪ್ರದೇಶ ಅಭಿವೃದ್ಧಿ ಈ ಅನುದಾನಕ್ಕೆ ಯಾವ ಯಾವ ಜಿಲ್ಲೆಯ ತಾಲ್ಲೂಕುಗಳು ಸೇರ್ಪಡೆಗೊಂಡಿವೆ?